Sri Dharmasthala Manjunatheshwara College
(Autonomous), Ujire-574 240, Dakshina Kannada, Karnataka State
(Re-accredited by NAAC at "A" grade with CGPA 3.61 out of 4)

# BOS Meeting Minutes
# Department of Kannada
# 2020-21

**Sri Dharmasthala Manjunatheshwara College**
**(Autonomous), Ujire-574 240, Dakshina Kannada, Karnataka State**
*(Re-accredited by NAAC at "A" grade with CGPA 3.61 out of 4)*

# DEPARTMENT OF KANNADA
## Proceedings of BOS meeting

ದಿನಾಂಕ: 18–08–2020

ಸಮಯ: ಮಧ್ಯಾಹ್ನ ಗಂಟೆ 3.00ಕ್ಕೆ

ಸ್ಥಳ: ಕನ್ನಡ ವಿಭಾಗ, ಎಸ್.ಡಿ.ಎಮ್.ಕಾಲೇಜು, ಉಜಿರೆ ಹಾಗೂ ಗೂಗಲ್‌ಮೀಟ್ ಆನ್‌ಲೈನ್ ಮಾಧ್ಯಮ

| AGENDA NO | AGENDA |
|---|---|
| Agenda-1<br>SDMCU/KAN-BOS/2020-21/01/01 | Reading the minutes of the previous BOS meeting & action report |
| Agenda-2<br>SDMCU/KAN-BOS/2020-21/01/02 | Review of results and achievements, action taken report of feedback of the stake holders |
| Agenda-3<br>SDMCU/KAN-BOS/2020-21/01/03 | Revision of syllabus/Courses highlighting entrepreneurship/employability/skill development |
| Agenda-4<br>SDMCU/KAN-BOS/2020-21/01/04 | No of New Courses introduced<br>Revision of question paper pattern |
| Agenda-5<br>SDMCU/KAN-BOS/2020-21/01/05 | Finalizing the list of examiners |
| Agenda-6<br>SDMCU/KAN-BOS/2020-21/01/06 | Any other matter |

**ಸದಸ್ಯರು:**

| ಕ್ರ.ಸಂ. | ಸದಸ್ಯರ ಹೆಸರು, ಹುದ್ದೆ ಮತ್ತು ವಿಳಾಸ | ಅಧ್ಯಯನ ಮಂಡಳಿಯಲ್ಲಿ ಜವಾಬ್ದಾರಿ |
|---|---|---|
| 1. | ಡಾ.ಬಿ.ಪಿ.ಸಂಪತ್‌ಕುಮಾರ, ಮುಖ್ಯಸ್ಥರು, ಕನ್ನಡ ವಿಭಾಗ, ಎಸ್.ಡಿ.ಎಮ್.ಕಾಲೇಜು, ಉಜಿರೆ | ಅಧ್ಯಕ್ಷರು |
| 2. | ಡಾ. ಹೆಚ್. ಟಿ. ಕೃಷ್ಣಮೂರ್ತಿ, ಮುಖ್ಯಸ್ಥರು ಕನ್ನಡ ವಿಭಾಗ ಹಾಗೂ ಪ್ರಾಂಶುಪಾಲರು, ಡಿ.ವಿ.ಎಸ್.ಕಾಲೇಜು, ಶಿವಮೊಗ್ಗ | ವಿಷಯ ಪರಿಣಿತರು |
| 3. | ಡಾ. ರಾಧಾಕೃಷ್ಣ ಬೆಳ್ಳೂರು, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಕಾಲೇಜು, ಕಾಸರಗೋಡು | ವಿಷಯ ಪರಿಣಿತರು |



08256 - 236220, 236101 (O)   236 220   sdmcollege@sdmcujire.in   www.sdmcujire.in

| | | |
|---|---|---|
| 4. | ಡಾ.ವಿಶ್ವನಾಥ ಬದಿಕಾನ, ಸಹಾಯಕ ಪ್ರಾಧ್ಯಾಪಕರು, ಸಂತ ಅಲೋಶಿಯಸ್ ಕಾಲೇಜು, ಮಂಗಳೂರು | ವಿ.ವಿ.ಪ್ರತಿನಿಧಿ |
| 5. | ಶ್ರೀ ಆನಂದ ಕೆ., ಸಹ ಉಪಾಧ್ಯಕ್ಷರು, ಮಣಿಪಾಲ ಮೀಡಿಯ ನೆಟ್ ವರ್ಕ್ ಲಿ. ಮಣಿಪಾಲ | ಉದ್ಯೋಗ ಸಂಬಂಧಿ ಪ್ರತಿನಿಧಿ |
| 6. | ಡಾ.ಮಾಧವ, ಸಹಾಯಕ ಪ್ರಾಧ್ಯಾಪಕರು, ವಿಶ್ವವಿದ್ಯಾಲಯ ಸಂಜೆ ಕಾಲೇಜು, ಹಂಪನಕಟ್ಟೆ, ಮಂಗಳೂರು | ಹಿರಿಯ ವಿದ್ಯಾರ್ಥಿ |
| 7. | ಡಾ.ಕೆ.ವಿ.ನಾಗರಾಜಪ್ಪ, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಡಿ.ಎಮ್.ಕಾಲೇಜು, ಉಜಿರೆ | ಸದಸ್ಯರು |
| 8. | ಶ್ರೀಮತಿ ಬೋಜಮ್ಮ, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಡಿ.ಎಮ್.ಕಾಲೇಜು, ಉಜಿರೆ | ಸದಸ್ಯರು |
| 9. | ಡಾ. ದಿವಾಕರ ಕೆ., ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಡಿ.ಎಮ್.ಕಾಲೇಜು, ಉಜಿರೆ | ಸದಸ್ಯರು |
| 10. | ಡಾ. ರಾಜಶೇಖರ, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಡಿ.ಎಮ್.ಕಾಲೇಜು, ಉಜಿರೆ | ಸದಸ್ಯರು |

ಆರಂಭದಲ್ಲಿ ಅಧ್ಯಯನ ಮಂಡಳಿಯ ಅಧ್ಯಕ್ಷರು ಸಭೆಯನ್ನು ಸುಸ್ಥಿತಿಗೆ ತಂದರು ಹಾಗೂ ಸದಸ್ಯರನ್ನು ಸ್ವಾಗತಿಸಿ ಸಭೆಯ ಕಲಾಪವನ್ನು ಆರಂಭಿಸಿದರು. ಈವರೆಗೆ ಕನ್ನಡ ಅಧ್ಯಯನ ಮಂಡಳಿಯಲ್ಲಿ ವಿಷಯ ಪರಿಣತರಾಗಿ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ ವಿಭಾಗದ ಶೈಕ್ಷಣಿಕ ಉನ್ನತಿಕೆಗೆ ಕೊಡುಗೆ ನೀಡಿದ್ದ ಪ್ರೊ.ಕೃಷ್ಣಮೂರ್ತಿ, ಮುಖ್ಯಸ್ಥರು, ಕನ್ನಡ ವಿಭಾಗ, ಗೋವಿಂದದಾಸ್ ಕಾಲೇಜು, ಸುರತ್ಕಲ್ ಹಾಗೂ ಡಾ.ಗಿರೀಶ್ ಭಟ್ ಅಜಕ್ಕಳ, ಪ್ರಾಂಶುಪಾಲರು, ಸ.ಪ್ರ.ಕಾ.ಬಂಟ್ವಾಳ ಇವರ ಸೇವೆಯನ್ನು ಸ್ಮರಿಸಿ ಅಧ್ಯಕ್ಷರು ಅವರಿಗೆ ಕೃತಜ್ಞತೆ ಹೇಳಿದರು. ಅಲ್ಲದೆ, ಮಂಡಳಿಗೆ ನೂತನವಾಗಿ ಸದಸ್ಯರಾಗಿರುವ ವಿಷಯ ಪರಿಣತರಾದ ಡಾ.ಹೆಚ್.ಟಿ.ಕೃಷ್ಣಮೂರ್ತಿ ಹಾಗೂ ಡಾ.ರಾಧಾಕೃಷ್ಣ ಬೆಳ್ಳೂರು ಅವರನ್ನು ಸಭೆಗೆ ಪರಿಚಯಿಸಿ ಅವರನ್ನು ಸ್ವಾಗತಿಸಿದರು.

**Agenda-1**

**Reading the minutes of the previous BOS meeting & action report**

ಕನ್ನಡ ವಿಭಾಗದಲ್ಲಿ ದಿ.13–06–2019ರಂದು ನಡೆದ ಅಧ್ಯಯನ ಮಂಡಳಿ ಸಭೆಯ ನಡೆವಳಿಗಳನ್ನು ಅಧ್ಯಯನ ಮಂಡಳಿಯ ಅಧ್ಯಕರು ಸಬೆಯ ಗಮನಕ್ಕೆ ತಂದರು. ಹಿಂದಿನ ಸಭೆಯಲ್ಲಿ ಸದಸ್ಯರು ನೀಡಿದ್ದ ಸಲಹೆಗಳನ್ನು ಅನುಷ್ಠಾನಕ್ಕೆ ತಂದಿರುವ ಬಗ್ಗೆ ಸಭೆಗೆ ಈ ಕೆಳಗಿನಂತೆ ಮಾಹಿತಿ ನೀಡಿದರು:

1. ಡಾ. ರಾಧಾಕೃಷ್ಣ ಬೆಳ್ಳೂರು ಅವರ ಹೆಸರನ್ನು ಪರೀಕ್ಷಾ ಮಂಡಳಿಗೆ ಸೇರ್ಪಡೆಗೊಳಿಬೇಕೆಂಬ ಸದಸ್ಯರು ನೀಡಿದ್ದ ಸಲಹೆಯಂತೆ ಅವರ ಹೆಸರನ್ನು ಪಟ್ಟಿಗೆ ಸೇರ್ಪಡೆಗೊಳಿಸಲಾಗಿದೆ.
2. ಶ್ರೀ ಪ್ರಶಾಂತ್ ರೈ ಹಾಗೂ ಶ್ರೀ ಜೋಗಿ ಅವರಿಂದ ವಿದ್ಯಾರ್ಥಿಗಳಿಗೆ ಬರೆವಣಿಗೆ ಕಲೆ ಕುರಿತು ತರಬೇತಿ ನೀಡಬೇಕೆಂದು ಸದಸ್ಯರು ನೀಡಿದ್ದ ಸಲಹೆಯಂತೆ ಈಗಾಗಲೇ ಸಂಬಂಧಪಟ್ಟ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಮಾತನಾಡಲಾಗಿದ್ದು, ಕಾರ್ಯಕ್ರಮವನ್ನು ಮುಂದೆ ನಡೆಸಲು ಯೋಜಿಸಲಾಗಿದೆ. ಈ ಕುರಿತು ಕನ್ನಡ ವಿಭಾಗದ ಡಾ.ರಾಜಶೇಖರ ಅವರಿಗೆ ಈ ಜವಾಬ್ದಾರಿಯನ್ನು ವಹಿಸಲಾಗಿದೆ.
3. ಹೆಚ್.ಎಸ್.ಕೆ ಅವರ ಲೇಖನ ಮಾದರಿಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಕುರಿತು ಸದಸ್ಯರು ನೀಡಿದ್ದ ಸಲಹೆಯಂತೆ ಪ್ರಥಮ ಬಿ.ಕಾಂ. ಬಿ.ಬಿ.ಎ, ಬಿ.ಸಿ.ಎ ವಿದ್ಯಾರ್ಥಿಗಳಿಗೆ ಅವರ ಲೇಖನವನ್ನು ಅಳವಡಿಸಲಾಗಿದೆ ಹಾಗು ಅದಕ್ಕೆ ಪೂರಕವಾಗಿ ಅವರ ಇತರ ಲೇಖನ ಮತ್ತು ಪುಸ್ತಕಗಳನ್ನು ವಿದ್ಯಾರ್ಥಿಗಳ ಗಮನಕ್ಕೆ ತರಲಾಗಿದೆ.

ಅನುಷ್ಠಾನ ವರದಿಯನ್ನು ಸಭೆ ಗಮನಿಸಿತು ಹಾಗೂ ನಡೆವಳಿಯನ್ನು ಅನುಮೋದಿಸಿತು.

**Agenda-2**

**Review of results and achievements, action taken report of feedback of the stake holders**

ಅಧ್ಯಯನ ಮಂಡಳಿಯ ಅಧ್ಯಕರು ವಿಭಾಗದ ಫಲಿತಾಂಶವನ್ನು ಸದಸ್ಯರ ಗಮನಕ್ಕೆ ತಂದರು.

ಮೂಲಕ ನಡೆಸಲಾಗುತ್ತಿರುವ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳ ವಿವರಗಳನ್ನು, ಶೈಕ್ಷಣಿಕ ಪ್ರಗತಿಯನ್ನು ಸಭೆಯ ಗಮನಕ್ಕೆ ತಂದರು.

| RESULT | | | | |
|---|---|---|---|---|
| 2015–16 | 2016–17 | 2017–18 | 2018–19 | 2019–20 |
| Lang-98 % | Lang-97.5 % | Lang-98.6 % | Lang-98.6 % | Lang-96.9 % |
| Opt 91.43 % | Opt 93.45 % | Opt 95.54 % | Opt 92.2 % | Opt- 96.1 % |

ಈ ಮೇಲ್ಕಂಡ ಅಂಶಗಳನ್ನು ಗಮನಸಿದ ಸಭೆ ವಿಭಾಗದ ಪ್ರಗತಿ ಹಾಗೂ ಚಟುವಟಿಕೆಗಳ ಕುರಿತು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಅದನ್ನು ದಾಖಲಿಸಿಕೊಳ್ಳಲು ಸೂಚಿಸಿತು.

1. ಪರೀಕ್ಷಾ ಫಲಿತಾಂಶ
2. ಕನ್ನಡ ವಿಭಾಗದ ಮೂಲಕ ಮಾಡಿಕೊಳ್ಳಲಾಗಿರುವ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ ಹಾಗೂ ನೀನಾಸಂ ಪ್ರತಿಷ್ಠಾನ, ಹೆಗ್ಗೋಡು_ ಈ ಎರಡು ಒಡಂಬಡಿಕೆಗಳು ಹಾಗೂ ಆ ಮೂಲಕ ನಡೆಸಲಾಗುತ್ತಿರುವ ಕಾರ್ಯಕ್ರಮಗಳು
3. ವಿದ್ಯಾರ್ಥಿ ಸಂಶೋಧನಾ ಚಟುವಟಿಕೆಗಳು
4. ವಿಸ್ತರಣಾ ಚಟುವಟಿಕೆಗಳು



08256 - 236220, 236101 (O)  236 220  sdmcollege@sdmcujire.in  www.sdmcujire.in

5. ವಿದ್ಯಾರ್ಥಿಗಳಿಂದ, ಅಧ್ಯಾಪಕರಿಂದ, ಹಿರಿಯ ವಿದ್ಯಾರ್ಥಿಗಳಿಂದ, ಅ.ಮಂ.ಸದಸ್ಯರಿಂದ ಪಡೆದ ಫೀಡ್‌ಬ್ಯಾಕ್‌ನ್ನು ಸಭೆ ಮುಂದೆ ಮಂಡಿಸಲಾಯಿತು. ಅವರ ಸಲಹೆಯಂತೆ ಪಠ್ಯಕ್ರಮಗಳನ್ನು ರೂಪಿಸಿಕೊಳ್ಳುವ ಹಾಗೂ ಬೋಧಿಸುವ ಕುರಿತು ಸಭೆಗೆ ಮಾಹಿತಿ ನೀಡಲಾಯಿತು

**Agenda-3**

**Revision of syllabus/Courses highlighting entrepreneurship/employability/skill development**

ಎ) ಲಿಂಗ ಸಮಾನತೆ, ಮಾನವೀಯ ಮೌಲ್ಯಗಳು, ಪರಿಸರ, ವೃತ್ತಿಪರತೆ ಇವುಗಳಿಗೆ ಒತ್ತು ನೀಡುವುದು

ಬಿ) ಸ್ಥಳೀಯ, ರಾಷ್ಟ್ರೀಯ ಮತ್ತು ಜಾಗತಿಕ ವಿಷಯಗಳಿಗೆ ಒತ್ತು ನೀಡುವುದು

ಸಿ) ಕೌಶಲ್ಯಾಧಾರಿತ ಪಠ್ಯ ಅಳವಡಿಸುವುದು.

ಈ ಮೇಲ್ಕಂಡ ನಡೆವಳಿಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ವಿಸ್ತೃತವಾದ ಚರ್ಚೆಯನ್ನು ನಡೆಸಲಾಯಿತು ಹಾಗೂ ಇವುಗಳನ್ನು ಪಠ್ಯಗಳಲ್ಲಿ ಅಳವಡಿಸಿಕೊಳ್ಳಲಾದ ವಿವರಗಳನ್ನುಳ್ಳ ಮಾಹಿತಿ ನೀಡುವ ಪಟ್ಟಿಯನ್ನು ಸಭೆಯ ಅನುಮೋದನೆ, ಸಲಹೆಗಳಿಗಾಗಿ ಮಂಡಿಸಲಾಯಿತು.

| Sl. No | Components | Paper and Unit | Topic/Remarks |
|---|---|---|---|
| 1 | Gender equity/Human values/Professtional ethics | Paper-8,unit-3(opt) | 1. ಸ್ತ್ರೀವಾದಿ ವಿಮರ್ಶೆ |
| | | Paper-1 unit-1(opt) | 1. ಸ್ತ್ರೀವಾದದ ತಾತ್ವಿಕಥೆ<br>2. ವಿಶೇಷ ಮಹಿಳಾ ಲೇಖಿಕಿಯರ ಅಧ್ಯಯನ |
| | | Paper-1,2,3,4<br>Unit-1,2 (Lang) | 1. ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು–ಕಥೆ<br>2. ಉತ್ತರದೇವಿ–ಜಾನಪದ<br>3. ಅಕ್ಕಮಹಾದೇವಿ ವಚನಗಳು<br>4. ಸವಿತಾ ನಾಗಭೂಷಣ, ಪ್ರತಿಭಾ ನಂದಕುಮಾರಿ, ವೈದೇಹಿ, ಎಲ್.ಸಿ.ಸುಮಿತ್ರ, ನೇಮಿಚಂದ್ರ,ಅನುಮಪ ನಿರಂಜನ –ಇವರ ಕತೆ ಹಾಗೂ ಕವನಗಳು |
| | | & separate Value added course Designed | ಮಹಿಳಾ ಅಧ್ಯಯನ |
| 2 | Environment | Paper-1-Unit-2 (Lang) | 1. ಪುಟ್ಟ ಗುಬ್ಬಿ ಕೇಳಿದ ದೊಡ್ಡ ಪ್ರಶ್ನೆ–ಲೇಖನ |



08256 - 236220, 236101 (O) 236 220 sdmcollege@sdmcujire.in www.sdmcujire.in

| | | | |
|---|---|---|---|
| | | Paper-2-Unit-2 (Lang)<br><br>Paper-2-Unit-2 (Lang) | 2. ಮುದ್ದು ಬೆಕ್ಕುಗಳ ಮೋಹಕ ಲೋಕ–ಲೇಖನ<br>3. ಮೂಲಿಕೆ ಬಳ್ಳಿ–ತೇಜಸ್ವಿ<br>4. ಬಡತನ ಅಭಿವೃದ್ಧಿ ಮಾಧ್ಯಮ–ಪಿ.ಸಾಯಿನಾಥ<br>5. ಗಂಗಾಮಾಯಿ–ಚಂದ್ರಶೇಖರ ಕಂಬಾರ |
| | | Elective paper -1 | ಸಾಹಿತ್ಯ ಮತ್ತು ಪರಿಸರ |
| 3 | Local/National/Global issues | Paper-1 unit-1(opt) | ಗೋವಿಂದ ಪೈ, ಪಂಜೆ, ಕಡೆಂಗೊಡ್ಲು, ಕೆ.ಟಿ.ಗಟ್ಟಿ, ಕೈಯಾರ, ವೈದೇಹಿ, ಬೊಳುವಾರು, ಅಡಿಗ, ನಿರಂಜನ, ಕಾರಂತ ಮೊದಲಾದ ಸ್ಥಳೀಯ ಲೇಖಕರ ಕತೆ, ಕವನ, ಜೀವನಚರಿತ್ರೆ,ಕಾದಂಬರಿ ಅಧ್ಯಯನ |
| | | Elective paper-4 | ಜನಪದ ಪ್ರದರ್ಶನ ಕಲೆಗಳು |
| | | Paper-4 unit-3(opt) | ಸ್ಥಳೀಯ ಜಾನಪದ ಆಚರಣೆಗಳು, ನಂಬಿಕೆಗಳು, ಉತ್ಸವಗಳು, ನಂಬಿಕೆಗಳು, ಯಕ್ಷಗಾನ, ಲಾವಣಿ, ಗಾದೆ, ಕಾವ್ಯ ಮೊದಲಾದ ಪ್ರಕಾರಗಳ ಅಧ್ಯಯನ |
| | | Paper-7 unit-1(opt) | ಆದಿಪುರಾಣ |
| | | Elective paper -1 | ಸಾಹಿತ್ಯ ಮತ್ತು ಪರಿಸರ |
| | | Paper-2-Unit-2 (Lang) | ಬಡತನ ಅಭಿವೃದ್ಧಿ ಮಾಧ್ಯಮ–ಪಿ.ಸಾಯಿನಾಥ |
| 4 | Skill Components | Elective papers | Katha Rachana Kaushala<br>Kavana Rachana Kaushala |
| | | Value added courses | Spardha Kannada<br>Cinema mattu Sahitya |
| | | Paper-4-Unit-3 (BVOC Lang) | Creative writings |
| 5 | Employability | Value added course | Spardha Kannada<br>Cinema mattu Sahitya |
| | | Paper-1,2,3,4,5,6,7,8 (Opt) | Designed syllabus accordingly to assist KPSC,UPSC and other Competitive examinations |

ಪಟ್ಟಿಯನ್ನು ಪರಿಶೀಲಿಸಿದ ಸದಸ್ಯರು ಪಠ್ಯಕ್ರಮಕ್ಕೆ ಒಪ್ಪಿಗೆ ಸೂಚಿಸಿತು. ಪಠ್ಯಕ್ರಮದಲ್ಲಿ–

ಕೌಶಲ್ಯಾಭಿವೃದ್ಧಿ ಕೋರ್ಸ್‌ಗಳು–11

ಉದ್ಯೋಗಸಂಬಂಧಿ ಕೋರ್ಸ್‌ಗಳು–10–ಇರುವುದನ್ನು ಗುರುತಿಸಿ ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು. ಸಭೆ ಈ ಬಗ್ಗೆ ತನ್ನ ಮೆಚ್ಚುಗೆ ವ್ಯಕ್ತಪಡಿಸಿತು.

ನಡೆವಳಿಯನ್ನು ಸಭೆ ಅನುಮೋದಿಸಿತು.

## Agenda-4

### No of New Courses introduced Revision of question paper pattern

- ಸ್ವಾಯತ್ತತೆಯ ಲಾಭ ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಆಗಬೇಕೆಂಬ ಸದುದ್ದೇಶದಿಂದ ಹಾಗೂ ಅವರಲ್ಲಿ ಕೌಶಲ, ಜ್ಞಾನ, ಅನ್ಯವಿಷಯಗಳ ಕುರಿತ ಅರಿವು ಹೆಚ್ಚಬೇಕು, ವಿದ್ಯಾರ್ಥಿಗಳಿಗೆ ಹೆಚ್ಚು ಅವಕಾಶ ಹಾಗೂ ಐಚ್ಛಿಕಗಳು ಇರಬೇಕೆಂಬ ಉದ್ದೇಶಗಳಿಂದ ಈಗಿರುವ ನಾಲ್ಕು ಇಲೆಕ್ಟಿವ್‌ಗಳ ಜೊತೆ ಹೆಚ್ಚುವರಿಯಾಗಿ ಪ್ರತಿ ಸೆಮಿಸ್ಟರ್‌ಗೆ ತಲಾ ಎರಡರಂತೆ ಒಟ್ಟು 08 ಇಲೆಕ್ಟಿವ್‌ಗಳ ಪಠ್ಯಕ್ರಮ, ಪ್ರಶ್ನಪತ್ರಿಕೆ ಮಾದರಿಗಳ ಕರಡನ್ನು ಸಭೆಯ ಅನುಮೋದನೆ ಹಾಗೂ ಸಲಹೆಗಳಿಗಾಗಿ ಮಂಡಿಸಲಾಯಿತು ಹಾಗೂ ಇವುಗಳನ್ನು 2020–21ನೆಯ ಶೈಕ್ಷಣಿಕ ವರ್ಷದಿಂದ ಜಾರಿಗೆ ತರಲು ಸಭೆಯ ಅನುಮತಿ ಕೋರಲಾಯಿತು. (ಮೊದಲಿನ ನಾಲ್ಕು ಇಲೆಕ್ಟಿವ್‌ಗಳ ಜೊತೆ ಈಗಿನ ಎಂಟು ಎಲೆಕ್ಟಿವ್‌ಗಳು ಒಟ್ಟು 12 ಇಲೆಕ್ಟಿವ್‌ಗಳು)

ಅವುಗಳ ವಿವರ ಹೀಗಿದೆ:

**ಮೊದಲ ಸೆಮಿಸ್ಟರ್‌ಗೆ** 1. ವಿಶ್ವಾತ್ಮಕತೆ ಮತ್ತು ಕುವೆಂಪು (ಕುವೆಂಪು ಅವರ ವೈಚಾರಿಕ ಮನೋಭಾವನ್ನು ವಿದ್ಯಾರ್ಥಿಗಳಲ್ಲಿ ಉದ್ದೀಪನಗೊಳಿಸುವ ಉದ್ದೇಶ)

2. ಕಾವ್ಯ ರಚನಾ ಕೌಶಲ(ವಿದ್ಯಾರ್ಥಿಗಳಲ್ಲಿ ಬರವಣಿಗೆಯ ಕೌಶಲವನ್ನು ಉದ್ದೀಪನಗೊಳಿಸುವ ಉದ್ದೇಶ

**ಎರಡನೆಯ ಸೆಮಿಸ್ಟರ್‌ಗೆ** 1. ಬೇಂದ್ರೆ ಕಾವ್ಯದಲ್ಲಿ ಪ್ರಕೃತಿ ದರ್ಶನ (ವರಕವಿಯ ಪ್ರಕೃತಿ ದರ್ಶನದ ಸೂಕ್ಷ್ಮವನ್ನು, ಒಳನೋಟವನ್ನು ಪರಿಚಯಿಸುವ ಉದ್ದೇಶ)

2. ಕಥಾ ರಚನಾ ಕೌಶಲ(ವಿದ್ಯಾರ್ಥಿಗಳಲ್ಲಿ ಬರವಣಿಗೆಯ ಕೌಶಲವನ್ನು ಉದ್ದೀಪನಗೊಳಿಸುವ ಉದ್ದೇಶ)

**ಮೂರನೆಯ ಸೆಮಿಸ್ಟರ್‌ಗೆ** 1.ಜಾಗತೀಕರಣ–ಸಣ್ಣಕಥೆಗಳ ಅಧ್ಯಯನ (ಜಾಗತೀಕರಣದ ಪರಿಣಾಮವನ್ನು ಕತೆಗಾರರು ಸೃಜನಶೀಲವಾಗಿ ಕಂಡಬಗೆಯನ್ನು ತಿಳಿಯುವುದು)

2. ಕನ್ನಡ ಸಂಸ್ಕೃತಿ ಅಧ್ಯಯನ (ಕನ್ನಡದ ಅನನ್ಯ ಹಾಗೂ ವೈವಿಧ್ಯಪೂರ್ಣ ಸಂಸ್ಕೃತಿಯ ಅರಿವು ಮೂಡಿಸುವುದು)

**ನಾಲ್ಕನೆಯ ಸೆಮಿಸ್ಟರ್‌ಗೆ** 1. ಕನ್ನಡದಲ್ಲಿ ಬೌದ್ಧ ಸಾಹಿತ್ಯ (ಕರ್ನಾಟಕ ಸಂಸ್ಕೃತಿಗೆ ಬೌದ್ಧಧರ್ಮದ ಕೊಡುಗೆಯನ್ನು ಗಮನಿಸುವುದು)

2. ಜನಪದ ಪ್ರದರ್ಶನ ಕಲೆಗಳು (ಜನಪದ ಪ್ರದರ್ಶನ ಕಲೆಗಳ ಸ್ವರೂಪ, ವೈವಿಧ್ಯ, ಪಾರಂಪರಿಕ ಮಹತ್ವಗಳ ಅರಿವು ಮೂಡಿಸುವುದು)

- **ಬಿವೋಕ್ ಕೋರ್ಸಿನ ಪರಿಷ್ಕೃತ ಪಠ್ಯಕ್ರಮ**

  ದಿ.5.10.2019 ನಡೆದ ಅಧ್ಯಯನ ಮಂಡಳಿ ಸಭೆಯಲ್ಲಿ ಮಂಗಳೂರು ವಿ.ವಿ.ದ ಆದೇಶದ ಅನುಸಾರವಾಗಿ ಬಿ.ವೋಕ್ ಕೋರ್ಸ್‌ಗಳಿಗೆ ಮೊದಲ ಹಾಗೂ ಎರಡನೆಯ ಸೆಮಿಸ್ಟರ್‌ಗಳಿಗೆ ರೂಪಿಸಿಕೊಳ್ಳಲಾದ ಪಠ್ಯಕ್ರಮಕ್ಕೆ

ಅನುಮೋದನೆಯನ್ನು ಪಡೆಯಲಾಗಿತ್ತು. ಆದರೆ ಮಂಗಳೂರು ವಿ.ವಿ.ದ ನೂತನ ಆದೇಶದಂತೆ (ಮಂ.ವಿ.ವಿ/ಎ.ಸಿ.ಸಿ/ಸಿ.ಆರ್1/2020–21/ಎ8 ದಿ.3.9.2020) ಬಿ.ವೋಕ್ ತರಗತಿಗಳಿಗೆ ಮೂರು ಹಾಗೂ ನಾಲ್ಕನೆಯ ಸೆಮಿಸ್ಟರ್‌ಗಳಿಗೂ ಕನ್ನಡ ಭಾಷಾ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಬೇಕಾಗಿತ್ತು. ಹಾಗೆ ರೂಪಿಸಿಕೊಳ್ಳಲಾದ ನೂತನ ಪಠ್ಯಕ್ರಮದ ಕರಡು ಪ್ರತಿಯನ್ನು ಅನುಮೋದನೆ ಹಾಗೂ ಸಲಹೆಗಳಿಗಾಗಿ ಸಭೆಯಲ್ಲಿ ಮಂಡಿಸಲಾಯಿತು.

- **ವ್ಯಾಲ್ಯುಆ್ಯಡೆಡ್‌ಕೋರ್ಸ್ (ಸರ್ಟಿಫಿಕೆಟ್‌ಕೋರ್ಸು)ಗಳ ಪಠ್ಯಕ್ರಮ**
  ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಮನೋಭಾವನೆಯನ್ನು, ಉದ್ಯಮಶೀಲತೆಯನ್ನು, ಸಹೋದರತ್ವ, ಸಹಬಾಳ್ವೆಯ ಮನೋಭಾವನ್ನು ಬೆಳೆಸಬೇಕೆಂಬುದು ಸಂಸ್ಥೆಯ ಆಶಯ ಹಾಗೂ ನಿಯಮ. ಅದಕ್ಕೆ ಪೂರಕವಾಗುವಂತೆ 1. ಸ್ಪರ್ಧಾಕನ್ನಡ ಹಾಗೂ 2. ಮಹಿಳಾ ಅಧ್ಯಯನ ಎಂಬ ಎರಡು ವ್ಯಾಲ್ಯು ಆ್ಯಡೆಡ್ ಕೋರ್ಸುಗಳನ್ನು ರೂಪಿಸಿಕೊಳ್ಳಲಾಗಿದ್ದು ಅವುಗಳ ಪಠ್ಯಕ್ರಮದ ಕರಡು ಪ್ರತಿಯನ್ನು ಸಭೆಯ ಅನುಮೋದನೆ ಹಾಗೂ ಸಲಹೆಗಳಿಗಾಗಿ ಮಂಡಿಸಲಾಯಿತು.

ನೂತವಾಗಿ ರೂಪಿಸಿಕೊಳ್ಳಲಾದ ಈ ಮೇಲಿನ ಎಲ್ಲಾ ಪಠ್ಯಕ್ರಮಗಳನ್ನು ಸಭೆಯು ಪರಿಶೀಲಿಸಿತು ಹಾಗೂ ತನ್ನ ಅನುಮೋದನೆ ನೀಡಿತು ಹಾಗೂ ಪ್ರಶ್ನಪತ್ರಿಕೆ ಮಾದರಿಯಲ್ಲಿ ಯಾವುದೇ ಬದಲಾಣೆ ಬೇಕಾಗಿಲ್ಲ ಎಂದು ಅಭಿಪ್ರಾಯಪಟ್ಟಿತು.
ನಡೆವಳಿಗೆ ಸಭೆ ಅನುಮೋದನೆ ನೀಡಿತು.

## Agenda-5

### Finalizing the list of examiners

2020–21ನೆಯ ಶೈಕ್ಷಣಿಕ ವರ್ಷದಿಂದ ಈಗಾಗಲೇ ಇರುವ ಕನ್ನಡ ವಿಭಾಗದ ಪರೀಕ್ಷಾ ಮೌಲ್ಯಮಾಪಕರ ಪಟ್ಟಿಯನ್ನು ಸಭೆಯ ಗಮನಕ್ಕೆ ತರಲಾಯಿತು. ಸದಸ್ಯರು ನೀಡಿದ ಸಲಹೆಯಂತೆ ಪಟ್ಟಿಗೆ ನೂತನವಾಗಿ ಈ ಕೆಳಗಿನ ಹೆಸರುಗಳನ್ನು ಸೇರಿಸಿಕೊಂಡು ಪರಿಷ್ಕರಿಸಲಾಯಿತು.

1. ಡಾ.ಉಷಾ, ಸಹಾಯಕ ಪ್ರಾಧ್ಯಾಪಕರು, ಸ. ಪ್ರ. ಕಾ. ವಿರಾಜಪೇಟೆ
2. ಡಾ.ಬಸ್ತಮ್ ಪಯಾಸ್, ಸಹಾಯಕ ಪ್ರಾಧ್ಯಾಪಕರು, ಸೈಂಟ್ ಫಿಲೋಮಿನಾ ಕಾಲೇಜು, ಪುತ್ತೂರು
3. ಶ್ರೀ ಕಾವೇರಪ್ಪ, ಸಹಾಯಕ ಪ್ರಾಧ್ಯಾಪಕರು, ಕಾವೇರಿ ಕಾಲೇಜು, ಗೋಣಿಕೊಪ್ಪಲು
4. ಡಾ.ಅನುರಾಧಾ ಕುರುಂಜಿ, ಸಹಾಯಕ ಪ್ರಾಧ್ಯಾಪಕರು, ಎನ್.ಎಂ.ಸಿ.ಸುಳ್ಯ
5. ಡಾ.ದಿನೇಶ್ ನಾಯ್ಕ, ಸಹಾಯಕ ಪ್ರಾಧ್ಯಾಪಕರು, ಸೈಂಟ್ ಅಲೋಶಿಯಸ್ ಕಾಲೇಜು, ಮಂಗಳೂರು.

ಈ ನಡೆವಳಿಗೆ ಸಭೆಯು ತನ್ನ ಸರ್ವಾನುಮತದ ಅನುಮೋದನೆ ನೀಡಿತು

**Agenda-6**

**Any other matter**

ಕನ್ನಡ ವಿಭಾಗವು ಸಾಹಿತ್ಯಪರವಾದ ಅನೇಕ ವಿಚಾರ ಸಂಕಿರಣ, ಕಮ್ಮಟ, ಅಧ್ಯಯನ ಶಿಬಿರ, ಕ್ಷೇತ್ರಕಾರ್ಯಗಳನ್ನು ನಡೆಸುತ್ತಿದ್ದು, ಈ ಚಟುವಟಿಕೆಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿರುವ ಆಡಳಿತ ಮಂಡಳಿ ಅಭಿನಂದನಾರ್ಹ ಎಂಬ ವಿಚಾರವನ್ನು ಸದಸ್ಯರು ವ್ಯಕ್ತಪಡಿಸಿದರು.

ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು.

Sd/-
ಡಾ. ಬಿ. ಪಿ. ಸಂಪತ್‌ಕುಮಾರ
ಅಧ್ಯಕ್ಷರು, ಅಧ್ಯಯನ ಮಂಡಳಿ

ಡಾ. ಬಿ. ಪಿ. ಸಂಪತ್ ಕುಮಾರ
ಮುಖ್ಯಸ್ಥ, ಕನ್ನಡ ವಿಭಾಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು
ಉಜಿರೆ - ೫೭೪ ೨೪೦

S.D.M. COLLEGE, UJIRE, (Autonomous)
REGISTRAR
Office of the Registrar

Sri Dharmasthala Manjunatheshwara College
(Autonomous), Ujire-574 240, Dakshina Kannada, Karnataka State
(Re-accredited by NAAC at "A" grade with CGPA 3.61 out of 4)

# BOS Meeting Minutes
# Department of Kannada
# 2020-21

Sri Dharmasthala Manjunatheshwara College
(Autonomous), Ujire-574 240, Dakshina Kannada, Karnataka State
*(Re-accredited by NAAC at "A" grade with CGPA 3.61 out of 4)*

**DEPARTMENT OF KANNADA**
**Proceedings of BOS meeting**

ದಿನಾಂಕ: 27.04.2021

ಸಮಯ: ಮಧ್ಯಾಹ್ನ ಗಂಟೆ 3.00ಕ್ಕೆ

ಸ್ಥಳ: ಡಿಸ್‌ಕಷನ್ ಕೋಠಡಿ. ಎಸ್.ಡಿ.ಎಮ್.ಕಾಲೇಜು, ಉಜಿರೆ ಹಾಗೂ ಗೂಗಲ್‌ಮೀಟ್‌ಆನ್‌ಲೈನ್ ಮಾಧ್ಯಮ

| AGENDA NO | AGENDA |
|---|---|
| Agenda-1<br>SDMCU/KAN-BOS/2020-21/02/01 | Reading the minutes of the previous meeting and Action Taken Report |
| Agenda-2<br>SDMCU/KAN-BOS/2020-21/02/02 | Review of results and achievements/feed back of the stake holders |
| Agenda-3<br>SDMCU/KAN-BOS/2020-21/02/03 | Revision/Modification of syllabus/Employability/Skill enhancement/New Courses/question paper pattern |
| Agenda-4<br>SDMCU/KAN-BOS/2020-21/02/04 | Introduction of MOOC's related to the emerging areas of Elective/CC courses |
| Agenda-5<br>SDMCU/KAN-BOS/2020-21/02/05 | SWAYAM integrated chapters/Units |
| Agenda-6<br>SDMCU/KAN-BOS/2020-21/02/06 | Finalizing the list of Examiners |
| Agenda-7<br>SDMCU/KAN-BOS/2020-21/02/07 | Approval for the question bank & software generated question papers for term end exams |
| Agenda-8<br>SDMCU/KAN-BOS/2020-21/02/08 | Any other matter |



08256 - 236220, 236101 (O) 236 220 sdmcollege@sdmcujire.in www.sdmcujire.in

ಸದಸ್ಯರು:

| ಕ್ರಸಂ. | ಸದಸ್ಯರ ಹೆಸರು, ಹುದ್ದೆ ಮತ್ತು ವಿಳಾಸ | ಅಧ್ಯಯನ ಮಂಡಳಿಯಲ್ಲಿ ಜವಾಬ್ದಾರಿ |
|---|---|---|
| 1. | ಡಾ.ಬಿ.ಪಿ.ಸಂಪತ್‌ಕುಮಾರ<br>ಮುಖ್ಯಸ್ಥರು, ಕನ್ನಡ ವಿಭಾಗ, ಎಸ್.ಡಿ.ಎಮ್.ಕಾಲೇಜು, ಉಜಿರೆ | ಅಧ್ಯಕ್ಷರು |
| 2. | ಡಾ. ಹೆಚ್. ಟಿ. ಕೃಷ್ಣಮೂರ್ತಿ<br>ಮುಖ್ಯಸ್ಥರು ಕನ್ನಡ ವಿಭಾಗ ಹಾಗೂ ಪ್ರಾಂಶುಪಾಲರು, ಡಿ.ವಿ.ಎಸ್.ಕಾಲೇಜು, ಶಿವಮೊಗ್ಗ | ವಿಷಯ ಪರಿಣಿತರು |
| 3. | ಡಾ. ರಾಧಾಕೃಷ್ಣ ಬೆಳ್ಳೂರು, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಕಾಲೇಜು, ಕಾಸರಗೋಡು | ವಿಷಯ ಪರಿಣಿತರು |
| 4. | ಡಾ.ವಿಶ್ವನಾಥ ಬದಿಕಾನ, ಸಹಾಯಕ ಪ್ರಾಧ್ಯಾಪಕರು, ಸಂತ ಅಲೋಶಿಯಸ್ ಕಾಲೇಜು, ಮಂಗಳೂರು | ವಿ.ವಿ.ಪ್ರತಿನಿಧಿ |
| 5. | ಶ್ರೀ ಆನಂದ ಕೆ., ಸಹ ಉಪಾಧ್ಯಕ್ಷರು, ಮಣಿಪಾಲ ಮೀಡಿಯ ನೆಟ್ ವರ್ಕ್ ಲಿ. ಮಣಿಪಾಲ | ಉದ್ಯೋಗ ಸಂಬಂಧಿ ಪ್ರತಿನಿಧಿ |
| 6. | ಡಾ.ಮಾಧವ, ಸಹಾಯಕ ಪ್ರಾಧ್ಯಾಪಕರು, ವಿಶ್ವವಿದ್ಯಾಲಯ ಸಂಜೆ ಕಾಲೇಜು, ಹಂಪನಕಟ್ಟೆ, ಮಂಗಳೂರು | ಹಿರಿಯ ವಿದ್ಯಾರ್ಥಿ |
| 7. | ಶ್ರೀಮತಿ ಬೋಜಮ್ಮ, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಡಿ.ಎಮ್.ಕಾಲೇಜು, ಉಜಿರೆ | ಸದಸ್ಯರು |
| 8. | ಡಾ. ದಿವಾಕರ ಕೆ., ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಡಿ.ಎಮ್.ಕಾಲೇಜು, ಉಜಿರೆ | ಸದಸ್ಯರು |
| 9. | ಡಾ. ರಾಜಶೇಖರ, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಡಿ.ಎಮ್.ಕಾಲೇಜು, ಉಜಿರೆ | ಸದಸ್ಯರು |
| 10. | ಡಾ.ಎಂ.ಪಿ.ಶ್ರೀನಾಥ, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಡಿ.ಎಮ್.ಕಾಲೇಜು, ಉಜಿರೆ | ಸದಸ್ಯರು |
| 11. | ಶ್ರೀ ರವಿಶಂಕರ, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಡಿ.ಎಮ್.ಕಾಲೇಜು, ಉಜಿರೆ | ಸದಸ್ಯರು |

ಆರಂಭದಲ್ಲಿ ಅಧ್ಯಯನ ಮಂಡಳಿಯ ಅಧ್ಯಕ್ಷರು ಸಭೆಯನ್ನು ಸುಸ್ಥಿತಿಗೆ ತಂದರು ಹಾಗೂ ಸದಸ್ಯರನ್ನು ಸ್ವಾಗತಿಸಿ ಸಭೆಯ ಕಲಾಪವನ್ನು ಆರಂಭಿಸಿದರು. ಈವರೆಗೆ ಕನ್ನಡ ವಿಭಾಗದಲ್ಲಿ 27 ವರ್ಷಗಳ ಕಾಲ ಸಹ ಪ್ರಾಧ್ಯಾಪಕರಾಗಿದ್ದು, ಅಧ್ಯಯನ ಮಂಡಳಿಯಲ್ಲಿ ಸದಸ್ಯರಾಗಿದ್ದು ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ ವಿಭಾಗದ ಶೈಕ್ಷಣಿಕ ಉನ್ನತಿಕೆಗೆ ಕೊಡುಗೆ ನೀಡಿದ್ದ ಡಾ.ಕೆ.ವಿ.ನಾಗರಾಜಪ್ಪ ಇವರ ಸೇವೆಯನ್ನು ಸ್ಮರಿಸಿ ಅಧ್ಯಕ್ಷರು ಅವರಿಗೆ ಕೃತಜ್ಞತೆ ಹೇಳಿದರು. ಅಲ್ಲದೆ, ಮಂಡಳಿಗೆ ನೂತನವಾಗಿ ಸದಸ್ಯರಾಗಿರುವ ಶ್ರೀ ರವಿಶಂಕರ, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಡಿ.ಎಮ್.ಕಾಲೇಜು, ಉಜಿರೆ ಅವರನ್ನು ಸಭೆಗೆ ಪರಿಚಯಿಸಿ ಅವರನ್ನು ಸ್ವಾಗತಿಸಿದರು.

## Agenda-1

**Reading the minutes of the previous meeting and Action Taken Report**

ಕನ್ನಡ ವಿಭಾಗದಲ್ಲಿ ದಿ.18.08.2020 ರಂದು ನಡೆದ ಅಧ್ಯಯನ ಮಂಡಳಿ ಸಭೆಯ ನಡೆವಳಿಗಳನ್ನು ಅಧ್ಯಯನ ಮಂಡಳಿಯ ಅಧ್ಯಕರು ಸಬೆಯ ಗಮನಕ್ಕೆ ತಂದರು. ಹಿಂದಿನ ಸಭೆಯಲ್ಲಿ ಸದಸ್ಯರು ನೀಡಿದ್ದ ಸಲಹೆಗಳನ್ನು ಅನುಷ್ಠಾನಕ್ಕೆ ತಂದಿರುವ ಬಗ್ಗೆ ಸಭೆಗೆ ಈ ಕೆಳಗಿನಂತೆ ಮಾಹಿತಿ ನೀಡಿದರು:

| ಕ್ರ.ಸಂ. | ಸದಸ್ಯರು ನೀಡಿದ ಸಲಹೆ | ತೆಗೆದುಕೊಳ್ಳಲಾದ ಕ್ರಮ |
|---|---|---|
| 1 | ಪಠ್ಯಕ್ರಮದಲ್ಲಿರುವ ಅಕ್ಷರ ಸ್ಖಾಲಿತ್ಯ ಸರಿಪಡಿಸಿಕೊಳ್ಳುವ ಬಗ್ಗೆ | ಈ ಕುರಿತು ಕ್ರಮ ಕೈಗೊಳ್ಳಲಾಗಿದೆ, ಡಾ.ರಾಧಾಕೃಷ್ಣ ಅವರ ಸಲಹೆಯಂತೆ ಅವರ ಸೂಚನೆಯಂತೆ ಸೂಕ್ತ ತಿದ್ದುಪಡಿಗಳನ್ನು ಮಾಡಲಾಗಿದೆ. |
| 2. | ಕೌಶಲ್ಯಾಭಿವೃದ್ಧಿಗಾಗಿ ಕವಿತೆ, ಕತೆ ಬರೆಯುವುದು ಮೊದಲಾದಂತೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವುದು, ತರಬೇತಿ ನೀಡುವುದು | ಈ ಕುರಿತಂತೆ ಕೈಗೊಳ್ಳಲಾದ ಕ್ರಮಗಳು<br>1. ಕನ್ನಡ ಐಚ್ಛಿಕದಲ್ಲಿ ವಾರಕ್ಕೆ ಒಂದು ಗಂಟೆ ಪ್ರಾಯೋಗಿಕಕ್ಕಾಗಿ ಮೀಸಲಿಡುವುದು<br>2. ಮೂರು ವರ್ಷದ ವಿದ್ಯಾರ್ಥಿಗಳಿಗಾಗಿ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಕಾವ್ಯ ಕಂಠಪಾಠವನ್ನು ಜಾರಿಗೆ ತರುವುದು<br>3. ಅನುವಾದ ಕೌಶಲ ತರಬೇತಿ ನೀಡುವುದು<br>4. ಸಂದರ್ಶನ ಕಲೆಯ ಕುರಿತಂತೆ ಮಾಹಿತಿ ನೀಡುವುದು<br>5. ಕವಿತೆ, ಕಥೆ ರಚನೆಗೆ ಸಂಬಂಧಿಸಿದಂತೆ ಕಮ್ಮಟಗಳನ್ನು ಏರ್ಪಡಿಸುವುದು |



08256 - 236220, 236101 (O) 236 220 sdmcollege@sdmcujire.in www.sdmcujire.in

ಇವುಗಳೊಂದಿಗೆ, ವಿದ್ಯಾರ್ಥಿಗಳನ್ನು ನಾಲ್ಕಾರು ಗುಂಪುಗಳಲ್ಲಿ ವಿಂಗಡಿಸಿ ಪ್ರತಿಯೊಂದು ಗುಂಪಿಗೂ ವಿಮರ್ಶೆಯ ಮಾದರಿಗಳನ್ನು ಪರಿಚಯಿಸುವ ನಿಟ್ಟಿನಲ್ಲಿ ಮಾದರಿ ವಿಮರ್ಶೆಗಳನ್ನು ನೀಡಬಹುದೆಂದು ಪ್ರೊ.ಕೃಷ್ಣಮೂರ್ತಿಯವರು ಸಲಹೆ ನೀಡಿದರು. ಉದಾ: ಸ್ತ್ರೀವಾದಿ ವಿಮರ್ಶೆ, ಬಹುತ್ವ ವಿಮರ್ಶೆ, ವ್ಯಕ್ತಿನಿಷ್ಠ ವಿಮರ್ಶೆ, ಕೃತಿನಿಷ್ಠ ವಿಮರ್ಶೆ, ದಲಿತ ವಿಮರ್ಶೆ, ನವ್ಯವಿಮರ್ಶೆ ಇತ್ಯಾದಿ.

ಸಲಹೆಯನ್ನು ಮುಂದಿನ ದಿನಗಳಲ್ಲಿ ಪರಿಗಣಿಸಲಾಗುವುದೆಂದು ಅಧ್ಯಕ್ಷರು ಸಭೆಗೆ ವಿವರಣೆ ನೀಡಿದರು.

ಅನುಷ್ಠಾನ ವರದಿಯನ್ನು ಸಭೆ ಗಮನಿಸಿತು ಹಾಗೂ ನಡೆವಳಿಯನ್ನು ಅನುಮೋದಿಸಿತು.

## Agenda-2

**Review of results and achievements/feed back of the stake holders**

ಅಧ್ಯಯನ ಮಂಡಳಿಯ ಅಧ್ಯಕರು ವಿಭಾಗದ 2020–21 ನೆಯ ಸಾಲಿನ ಫಲಿತಾಂಶವನ್ನು ಸದಸ್ಯರ ಗಮನಕ್ಕೆ ತಂದರು.

| RESULT | | | | |
|---|---|---|---|---|
| 2016–17 | 2017–18 | 2018–19 | 2019–20 | 2020–21 |
| Lang-97.5 % | Lang-98.6 % | Lang-98.6 % | Lang-96.9 % | Lang-95.9 % |
| Opt 93.45 % | Opt 95.54 % | Opt 92.2 % | Opt- 96.1 % | Opt- 93.33 % |

ಅಲ್ಲದೆ, ವಿಭಾಗದ ಪ್ರಗತಿ ಹಾಗೂ ಚಟುವಟಿಕೆಗಳ ಕುರಿತು ಅಧ್ಯಕ್ಷರು ಸಭೆಗೆ ಮಾಹಿತಿ ನೀಡಿದರು.

1. ಕನ್ನಡ ವಿಭಾಗದ ಮೂಲಕ ಮಾಡಿಕೊಳ್ಳಲಾಗಿರುವ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ ಹಾಗೂ ನೀನಾಸಂ ಪ್ರತಿಷ್ಠಾನ, ಹೆಗ್ಗೋಡು_ ಈ ಎರಡು ಒಡಂಬಡಿಕೆಗಳು ಹಾಗೂ ಆ ಮೂಲಕ ನಡೆಸಲಾಗುತ್ತಿರುವ ಕಾರ್ಯಕ್ರಮಗಳು
2. ನುಡಿ ಸಂಭ್ರಮ ಸರಣಿ ಉಪನ್ಯಾಸ ಕಾರ್ಯಕ್ರಮಗಳು
3. ಹಳಗನ್ನಡ ಬೋಧನೆ ಹಾಗೂ ಪ್ರಾಯೋಗಿಕ ತರಗತಿಗಳು
4. ವಿದ್ಯಾರ್ಥಿ ಸಂಶೋಧನಾ ಚಟುವಟಿಕೆಗಳು
5. ವಿಸ್ತರಣಾ ಚಟುವಟಿಕೆಗಳು
6. ವಿದ್ಯಾರ್ಥಿಗಳಿಂದ, ಅಧ್ಯಾಪಕರಿಂದ, ಹಿರಿಯ ವಿದ್ಯಾರ್ಥಿಗಳಿಂದ, ಅ.ಮಂ.ಸದಸ್ಯರಿಂದ ಪಡೆದ ಫೀಡ್‌ಬ್ಯಾಕ್‌ನ್ನು ಸಭೆ ಮುಂದೆ ಮಂಡಿಸಲಾಯಿತು. ಅವರ ಸಲಹೆಯಂತೆ ಪಠ್ಯಕ್ರಮಗಳನ್ನು ರೂಪಿಸಿಕೊಳ್ಳುವ ಹಾಗೂ ಬೋಧಿಸುವ ಕುರಿತು ಸಭೆಗೆ ಮಾಹಿತಿ ನೀಡಲಾಯಿತು

ಈ ಮಾಹಿತಿಗಳನ್ನು ಸಭೆ ಗಮನಿಸಿತು ಹಾಗೂ ವಿಭಾಗದ ಮೂಲಕ ನಡೆಸಲಾಗುತ್ತಿರುವ ಚಟುವಟಿಕೆಗಳಿಗೆ ತಮ್ಮ ಮೆಚ್ಚುಗೆ ಹೇಳಿ ನಡೆವಳಿಯನ್ನು ಅನುಮೋದಿಸಿತು

## Agenda-3

Revision/Modification of syllabus/Employability/Skill enhancement/New Courses/question paper pattern

ಕನ್ನಡ ವಿಭಾಗದ ಮೂಲಕ 2019–20ನೆಯ ಶೈಕ್ಷಣಿಕ ವರ್ಷದಿಂದ ಜಾರಿಗೆ ತರಲಾಗಿರುವ ನೂತನ ಪಠ್ಯಕ್ರಮವನ್ನು ಸದಸ್ಯರ ಗಮನಕ್ಕೆ ಅಧ್ಯಕ್ಷರು ತಂದರು ಹಾಗೂ ಇವುಗಳಲ್ಲಿ ಏನಾದರೂ ಬದಲಾವಣೆ ಬೇಕಾದರೆ ಸೂಚಿಸಬೇಕೆಂಬುದಾಗಿ ಕೋರಿಕೊಂಡರು. ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳು ಹೀಗಿವೆ:

1. ಕಲಾ ನಿಕಾಯ (ಬಿ.ಎ) ವಾಣಿಜ್ಯ ನಿಕಾಯ (ಬಿ.ಕಾಂ.ಬಿ.ಬಿ.ಎ) ವಿಜ್ಞಾನ ನಿಕಾಯ (ಬಿಎಸ್ಸಿ, ಬಿಸಿಎ) ಎಂಬುದಾಗಿ ವರ್ಗೀಕರಿಸಿಕೊಂಡು ಆಯಾ ನಿಕಾಯಗಳಿಗೆ ಪ್ರತ್ಯೇಕ ಪಠ್ಯಕ್ರಮವನ್ನು ಮುಂದಿನ ದಿನಗಳಲ್ಲಿ ಅನುಷ್ಠಾನಕ್ಕೆ ತರಲು ಯೋಚಿಸಬಹುದು.

ಸದಸ್ಯರು ನೀಡಿದ ಈ ಸಲಹೆಯನ್ನು ಗಮನಿಸಿದ ಅಧ್ಯಕ್ಷರು ಮುಂದಿನ ದಿನಗಳಲ್ಲಿ ಹೊಸ ಶಿಕ್ಷಣ ನೀತಿಯು ಅನುಷ್ಠಾನಕ್ಕೆ ಬರಲಿದ್ದು, ಅದರ ರೂಪರೇಖೆಯನ್ನು ನೋಡಿಕೊಂಡು ಈ ಬಗ್ಗೆ ಪರಿಶೀಲಿಸಲಾಗುವುದೆಂದು ಹೇಳಿ ಅಂಥ ಸಂದರ್ಭದಲ್ಲಿ ಸದಸ್ಯರ ಸಹಕಾರವನ್ನು ಕೋರಿಕೊಂಡರು.
ನಡೆವಳಿಯನ್ನು ಸಭೆ ಅನುಮೋದಿಸಿತು

## Agenda-4

**Introduction of MOOC's related to the emerging areas of Elective/CC courses**

ಸ್ವಾಯತ್ತತೆಯ ಲಾಭ ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಆಗಬೇಕೆಂಬ ಸದುದ್ದೇಶದಿಂದ ಹಾಗೂ ಅವರಲ್ಲಿ ಕೌಶಲ, ಜ್ಞಾನ, ಅನ್ಯವಿಷಯಗಳ ಕುರಿತ ಅರಿವು ಹೆಚ್ಚಬೇಕು, ವಿದ್ಯಾರ್ಥಿಗಳಿಗೆ ಹೆಚ್ಚು ಅವಕಾಶ ಹಾಗೂ ಐಚ್ಛಿಕಗಳು ಇರಬೇಕೆಂಬ ಉದ್ದೇಶಗಳಿಂದ ಈಗಿರುವ 12 ಇಲೆಕ್ಟಿವ್‌ಗಳ ಜೊತೆ ಹೆಚ್ಚುವರಿಯಾಗಿ ಸ್ವಯಂ ಪ್ಲಾಟ್‌ಫಾರಂನ ಅಡಿಯಲ್ಲಿ ಬರುವ ಮುಕ್ತ ಆನ್‌ಲೈನ್‌ಕೋರ್ಸ್‌ಗಳನ್ನು ಸೂಚಿಸಬೇಕೆಂದು ಸಭೆಗೆ ಅಧ್ಯಕ್ಷರು ಕೋರಿಕೊಂಡರು.

1. ಕನ್ನಡಕ್ಕೆ ಸಂಬಂಧಿಸಿದಂತೆ ಅಂಥ ಕೋರ್ಸ್‌ಗಳು ಲಭ್ಯವಿಲ್ಲದದಿರುವುದರಿಂದ ಕನ್ನಡ ವಿಭಾಗದ ಮೂಲಕ ಅಂಥ ಕೋರ್ಸ್‌ಗಳನ್ನು ತಯಾರಿಸಿ ವಿದ್ಯಾರ್ಥಿಗಳಿಗೆ ಒದಗಿಸುವ ನಿಟ್ಟಿನಲ್ಲಿ 1. ಪ್ರದರ್ಶನ ಕಲೆ ಹಾಗೂ 2. ಹಳಗನ್ನಡ ವಾಚನ/ಪ್ರವಚನ– ಈ ವಿಷಯಗಳ ಕುರಿತು ಯೋಚಿಸಬಹುದೆಂದು ಸಭೆ ಸಲಹೆ ನೀಡಿತು.
2. ಕನ್ನಡದ ಬದಲು ಬೇರೆ ಭಾಷೆಯ ವಿಷಯವನ್ನು ತೆಗೆದುಕೊಳ್ಳಬಹುದು.

ಈ ಕುರಿತು ಮುಂದಿನ ದಿನಗಳಲ್ಲಿ ತಜ್ಞರೊಂದಿಗೆ ಸಮಾಲೋಚನೆ ನಡೆಸಿ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು ಎಂದು ಅಧ್ಯಕ್ಷರು ಸಭೆಗೆ ವಿವರಣೆ ನೀಡಿದರು.
ಈ ನಡೆವಳಿಯನ್ನು ಸಭೆ ಅನುಮೋದಿಸಿತು

## Agenda-5

**SWAYAM integrated chapters/Units**

ಗ್ರೂಪ್ ಒಂದರ ಕೋರ್ ಕೋರ್ಸ್‌ಗಳಲ್ಲಿ ನಿಗದಿ ಪಡಿಸಲಾಗಿರುವ ಘಟಕಗಳಲ್ಲಿ ಯಾವುದಾದರೂ ಒಂದು ಘಟಕಕ್ಕೆ ಸಂಬಂಧಿಸಿದಂತೆ ಆನ್‌ಲೈನ್‌ನಲ್ಲಿ ಲಭ್ಯವಿರುವ ಕೋರ್ಸ್‌ಗಳನ್ನು ಹುಡುಕಿ ವಿದ್ಯಾರ್ಥಿಗಳು ಸ್ವಯಂ ಅಧ್ಯಯನ ಮಾಡಿಕೊಳ್ಳುವಂತೆ, ಚರ್ಚೆ, ಸಂವಾದ, ಡೆಸರ್‌ಟೇಷನ್ ಬರೆಯುವುದು ಮೊದಲಾದ ವಿಧಾನಗಳ ಮೂಲಕ ತಮ್ಮ ಕಲಿಕೆಯನ್ನು ಪ್ರಾಯೋಗಿಕ ನೆಲೆಯಲ್ಲಿ ವಿಸ್ತರಿಸಿಕೊಳ್ಳಲು ಅನುಕೂಲವಾಗುವ ನಿಟ್ಟಿನಲ್ಲಿ ಈ ಚಿಂತನೆ ಮಾಡಲಾಗಿದ್ದು, ಸದಸ್ಯರು ಈ ಕುರಿತು ತಮ್ಮ ಸಲಹೆ ನೀಡಬೇಕೆಂದು ಅಧ್ಯಕ್ಷರು ಕೋರಿಕೊಂಡರು.

ಮೇಲಿನ ನಡೆವಳಿಯಲ್ಲಿ ಚರ್ಚಿಸಲಾದ ವಿಷಯಗಳು ಇಲ್ಲಿಯೂ ಅನ್ವಯಿಸುತ್ತದೆ, ಹೀಗಾಗಿ ಈ ಬಗೆಗೆ ಮೇಲೆ ಸೂಚಿಸಲಾದ ಸಲಹೆಗಳನ್ನೇ ಪರಿಗಣಿಸಬಹುದೆಂದು ಸಭೆ ಸೂಚನೆ ನೀಡಿತು.

ಈ ನಡೆವಳಿಯನ್ನು ಸಭೆ ಅನುಮೋದಿಸಿತು.

## Agenda-6

**Finalizing the list of Examiners**

ಕನ್ನಡ ವಿಭಾಗದಲ್ಲಿ ಸಹ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ.ಕೆ.ವಿ.ನಾಗರಾಜಪ್ಪ ಅವರು ಸೇವೆಯಿಂದ ನಿವೃತ್ತರಾಗಿರುವುದರಿಂದ ಅವರ ಹೆಸರನ್ನು ಪರೀಕ್ಷಾ ಮೌಲ್ಯಮಾಪಕರ ಪಟ್ಟಿಯಿಂದ ಕೈಬಿಡಲು ಸಭೆಯಲ್ಲಿ ಚರ್ಚಿಸಲಾಯಿತು.

ಈ ನಡೆವಳಿಗೆ ಸಭೆಯು ಅನುಮೋದನೆ ನೀಡಿತು.

## Agenda-7

**Approval for the question bank & software generated question papers for term end exams**

ತಂತ್ರಾಂಶ ಆಧಾರಿತ ಶಿಕ್ಷಣಕ್ಕೆ ಹೆಚ್ಚು ಹೆಚ್ಚು ಆದ್ಯತೆ ಸಿಗುತ್ತಿರುವ ಪ್ರಸ್ತುತ ಸಂದರ್ಭದ ಅಗತ್ಯವನ್ನು ಪರಿಗಣಿಸಿ ಕಾಲೇಜಿನ ಸಾಫ್ಟ್‌ವೇರ್ ಮೂಲಕ ಪ್ರಶ್ನಪತ್ರಿಕೆಗಳನ್ನು ಸ್ವಯಂ ಪಡೆದುಕೊಳ್ಳಲು ಅನುಕೂಲವಾಗಲು ಯೋಜನೆ ರೂಪಿಸಿಕೊಳ್ಳಲಾಗಿದೆ. ಇದರ ಮೊದಲ ಹಂತವಾಗಿ ಮಾದರಿ ಪ್ರಶ್ನಪತ್ರಿಕೆಗಳನ್ನು ಸಿದ್ಧಪಡಿಸಲಾಗಿದ್ದು, ಅವುಗಳನ್ನು ಅಪ್‌ಲೋಡ್ ಮಾಡಲು ಹಾಗು ತಂತ್ರಾಂಶದ ನೆರವಿನಿಂದ ಪ್ರಶ್ನಪತ್ರಿಕೆಯನ್ನು ಜನರೇಟ್ ಮಾಡಿಕೊಳ್ಳಲು ಅಧ್ಯಯನ ಮಂಡಳಿಯ ಅನುಮೋದನೆ ಕೋರಲಾಯಿತು.

ಹೊಸ ಯೋಜನೆಯಲ್ಲಿ ಸಾಕಷ್ಟು ಪಾರದರ್ಶಕತೆಯನ್ನು ಕಾಯ್ದುಕೊಳ್ಳುವುದರ ಮೂಲಕ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಬಹುದಾಗಿದೆ ಎಂದು ಸಭೆ ಸೂಚನೆ ನೀಡಿತು.

It is resolved to approve the question bank prepared by the department and to give permission to BOE Chairman to add/edit/delete and generate question paper from EERPMS for term end examinations.

**Agenda-8**

**Any other matter**

ಕನ್ನಡ ವಿಭಾಗವು ಸಾಹಿತ್ಯಪರವಾದ ಅನೇಕ ವಿಚಾರ ಸಂಕಿರಣ, ಕಮ್ಮಟ, ಅಧ್ಯಯನ ಶಿಬಿರ, ಕ್ಷೇತ್ರಕಾರ್ಯಗಳನ್ನು ನಡೆಸುತ್ತಿದ್ದು, ಈ ಚಟುವಟಿಕೆಗಳಿಗೆ ವಿಶೇಷ ಪ್ರೋತ್ಸಾಹ ನೀಡುತ್ತಿರುವ ಆಡಳಿತ ಮಂಡಳಿ ಅಭಿನಂದಹಾರ್ಹ ಎಂಬ ವಿಚಾರವನ್ನು ಸದಸ್ಯರು ವ್ಯಕ್ತಪಡಿಸಿದರು.

ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು.

S.D.M. COLLEGE, UJIRE, (Autonomous)
REGISTRAR
Office of the Registrar

Sd/-
ಡಾ. ಬಿ. ಪಿ. ಸಂಪತ್‌ಕುಮಾರ
ಅಧ್ಯಕ್ಷರು, ಅಧ್ಯಯನ ಮಂಡಳಿ

ಡಾ. ಬಿ. ಪಿ. ಸಂಪತ್ ಕುಮಾರ
ಎಂ. ಎ., ಪಿಹೆಚ್.ಡಿ.,
ಮುಖ್ಯಸ್ಥ, ಕನ್ನಡ ವಿಭಾಗ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು
ಉಜಿರೆ - ೫೭೪ ೨೪೦